**ಓ.ಎಸ್. ನಂಃ 131/17**
**ಪಿ.ಡಬ್ಲ್ಯೂಃ 1**

**ದಿನಾಂಕ 05-04-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ವಾದಿಯ ಪರ: ಶ್ರೀ ಜಿ.ಬಿ.ಆರ್. ವಕೀಲರಿಂದಃ**

ನಾನು ಈಗಾಗಲೇ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ದಿಃ 27.10.2017 ರಂದು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ್ದು ನಂತರದಲ್ಲಿ ವಿವಾದಾಂಶ ಸಂಖ್ಯೆ 8 ರ ಮೇಲೆ ಈ ನ್ಯಾಯಾಲಯವು ಆದೇಶವನ್ನು ಹೊರಡಿಸಿ ನನ್ನ ವಾದ ಪತ್ರವನ್ನು ತೀರಸ್ಕರಿಸಿದ್ದು ಇರುತ್ತದೆ. ನಂತರದಲ್ಲಿ ಸದರಿ ಆದೇಶದ ವಿರುದ್ಧ ನಾನು ಮೇಲ್ಮನವಿಯನ್ನು ಸಲ್ಲಿಸಿದ್ದು ನನ್ನ ಮೇಲ್ಮನವಿಯು ಪುರಸ್ಕರಿಸಿ ಈ ದಾವೆಯನ್ನು ಪುನಃ ವಿಚಾರಣೆಗಾಗಿ ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯವು ರಿಮಾಂಡ ಮಾಡಿರುತ್ತದೆ. ನಾನು ದಿಃ 27.10.2017 ರಂದು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ನನ್ನ ಹೆಚ್ಚುವರಿಯಾಗಿ ಯಾವುದೇ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಲು ಇರುವುದಿಲ್ಲ.

ಈ ಹಿಂದೆ ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು ಅವುಗಳನ್ನು ಈಗಾಗಲೇ ನಿಪಿ-1 ರಿಂದ ನಿಪಿ-56 ಎಂದು ಗುರುತಿಸಲಾಗಿರುತ್ತದೆ. ಮುಂದುವರೆದು ಈ ದಿನ ನಾನು ನ್ಯಾಯಾಲಯಕ್ಕೆ ಹೆಚ್ಚುವರಿ ದಾಖಲೆಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಶಾನೆ ಪಡಿಸಬೇಕಾಗಿ ಕೇಳಿಕೊಳ್ಳುತ್ತಿದ್ದೇನೆ.

ಶಾಲಾ ವರ್ಗಾವಣೆ ಪತ್ರವನ್ನು ನಿಪಿ-57 ಎಂದು, ಮರಣ ಪ್ರಮಾಣ ಪತ್ರವನ್ನು ನಿಪಿ-58 ಎಂದು, ಖಾಸ್ರಾ ಪಹಣಿಯನ್ನು ನಿಪಿ-59 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ**

ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು**
**ಯಾದಗಿರಿ**